# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು.

## ಸಿ.ಸಿ. 773/2024

ಫಿರ್ಯಾದುದಾರರುಃ ಸರ್ಕಾರದ ಪರ ಹುಣಸೂರು ಪಟ್ಟಣ ಪೊಲೀಸ್ ಠಾಣೆ,
ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿಗಳುಃ

1. ಸ್ವಾಮಿ ಎಸ್ ಬಿನ್ ಲೇಟ್ ಶಿವರಾಮು,
   ವಯಸ್ಸು 38 ವರ್ಷ.

2. ಸಣ್ಣಮ್ಮ ಕೋಂ ಲೇಟ್ ಶಿವರಾಮು,,
   ವಯಸ್ಸು 65 ವರ್ಷ.

3. ಅನಿತಾ ಕೋಂ ಸ್ವಾಮಿ,
   ವಯಸ್ಸು 32 ವರ್ಷ,
   ಎಲ್ಲರ ವಾಸಃ ರಂಗನಾಥ ಬಡಾವಣೆ,
   ಕಲ್ಕುಣಿಕೆ, ಹುಣಸೂರು ಟೌನ್
   ಮೈಸೂರು ಜಿಲ್ಲೆ.

## ದೋಷಾರೋಪಣೆ

**ಶ್ರೀಮತಿ. ಜೈಬುನ್ನಿಸಾ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಗಳಾ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ**

ದಿನಾಂಕ 02.12.2023 ರಂದು ಬೆಳಗ್ಗೆ 7.30 ಗಂಟೆಯ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದಿನಲ್ಲಿರುವ ಕಲ್ಕುಣಿಕೆಯ ರಂಗನಾಥ ಬಡಾವಣೆಯಲ್ಲಿ ಸಾಕ್ಷಿ-1ರವರ ಮನೆಯ ಮುಂದೆ ಇರುವ ಖಾಲಿ ಜಾಗ ಹಾಗೂ ರಸ್ತೆಯಲ್ಲಿ 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-2 ರವರನ್ನು ಕುರಿತು 1ನೇ ಆರೋಪಿಯಾದ ನೀವು ಏನೋ ಬೋಳಿ ಮಗನೆ ನನ್ನ ಮೇಲೆ ಗಲಾಟೆ ಮಾಡುತ್ತಿದ್ದಿಯಲ್ಲಾ ಈಗ ಬಾ ನೋಡೋಣವೆಂದು ಅವಾಚ್ಯ ಶಬ್ದಗಳಿಂದ ಬೈದು ಅವರನ್ನು ಜಗಳಕ್ಕೆ ಕರೆಯುತ್ತಿದ್ದಾಗ

ಸಾಕ್ಷಿ-1ರವರು ಈಗೆಲ್ಲ ಮಾತನಾಡಬೇಡ ಏನಾದರು ಇದ್ದರೆ ನ್ಯಾಯಾಪಂಚಾಯ್ತಿ ಮಾಡೋಣವೆಂದು ಹೇಳಿದಾಗ ಸೂಳೇ ಬಡ್ಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 504 ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ 2 ಮತ್ತು 3ನೇ ಆರೋಪಿಗಳಾದ ನೀವು ಸಾಕ್ಷಿ-1ರವರ ಮುಂದಲೆಯನ್ನು ಹಿಡಿದುಕೊಂಡು ಅವರನ್ನು ತಡೆದು ನಿಲ್ಲಿಸಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 341 ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ 2 ಮತ್ತು 3ನೇ ಆರೋಪಿಗಳಾದ ನೀವು ಸಾಕ್ಷಿ-1ರವರಿಗೆ ಕೈಗಳಿಂದ ಮೈಕೈ, ಹೊಟ್ಟೆ ಹಾಗೂ ತೊಡೆಯ ಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮತ್ತೊಮ್ಮೆ ನಮ್ಮ ತಂಟೆಗೆ ಬಂದರೆ ಕೊಲೆ ಮಾಡುವುದಾಗಿ ಸಾಕ್ಷಿ-1 ಮತ್ತು 2ರವರಿಗೆ ಕೊಲೆ ಬೆದರಿಕೆಯನ್ನು ಹಾಕಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 34ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಗಳು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

**(ಜೈಬುನ್ನಿಸಾ)**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,

ಹುಣಸೂರು.